ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 7/4/21

# ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಜಿಟಿಡಿ ಆಯ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತದ ಅಧ್ಯಕ್ಷರಾಗಿ ಮಾಜಿ ಸಚಿವ ಜಿ.ಟಿ.ದೇವೇಗೌಡ ಮತ್ತು ಮಹಾಮಂಡಳದ ಉಪಾಧ್ಯಕ್ಷರಾಗಿ ಜಗದೀಶ್ ಮಲ್ಲಿಕಾರ್ಜುನ ಕವಟಗಿಮಠ ಅವರು ಮಂಗಳವಾರ ಅವಿರೋಧವಾಗಿ ಆಯ್ಕೆಯಾದರು.

ರಾಜ್ಯ ಸಹಕಾರ ಮಹಾಮಂಡಳದ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಗೆ ಜಿ.ಟಿ.ದೇವೇಗೌಡ ಮತ್ತು ಜಗದೀಶ್ ಮಲ್ಲಿಕಾರ್ಜುನ ಕವಟಗಿಮಠ ಅವರನ್ನು ಹೊರತು ಪಡಿಸಿ ಬೇರೆ ಯಾರೂ ಅಭ್ಯರ್ಥಿಗಳಾಗಿ ಸ್ಪರ್ಧಿಸಿರಲಿಲ್ಲ. ಹೀಗಾಗಿ, ಚುನಾವಣಾಧಿಕಾರಿ ಉಮೇಶ್‌ಚಂದ್ರ ಅವರು, ಇಬ್ಬರೂ ಅವಿರೋಧ ಆಯ್ಕೆಯಾಗಿದ್ದಾರೆಂದು ಘೋಷಿಸಿದರು. ಬಳಿಕ ಜಿ.ಟಿ.ದೇವೇಗೌಡ ಅವರು ಮಹಾಮಂಡಳದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

**ಸಹಕಾರಿ ಸ್ಥಿತಿಗತಿ ಬಗ್ಗೆ ಸರ್ಕಾರಕ್ಕೆ ವರದಿ:** ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿ.ಟಿ.ದೇವೇಗೌಡ, ರಾಜ್ಯದಲ್ಲಿರುವ ಸಹಕಾರಿ ಸಂಘಗಳ ಸ್ಥಿತಿಗತಿಗಳ ಬಗ್ಗೆ ಸರ್ವೇ ಮಾಡಿಸಲಾಗುತ್ತದೆ. ಬಳಿಕ, ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಕೋವಿಡ್-19 ಬಳಿಕ ರಾಜ್ಯದಲ್ಲಿನ ಸಹಕಾರ ಸಂಘಗಳು ಯಾವ ಹಂತದಲ್ಲಿವೆ ಎಂಬುದನ್ನು ಸರ್ವೇ ಮಾಡಿಸಲಾಗುವುದು. ಯಾವ ಸಂಘಗಳು ನಷ್ಟದಲ್ಲಿವೆ. ಯಾವ ಸಂಘಗಳು ಲಾಭದಲ್ಲಿವೆ ಎಂಬುದು ಸರ್ವೇ ನಂತರ ತಿಳಿಯಲಿದೆ. ಸಹಕಾರಿ ಸಂಘಗಳ ವಾಸ್ತವ ಸ್ಥಿತಿಗತಿಯನ್ನು ವರದಿ ಸಲ್ಲಿಸಿ, ಅವುಗಳ ಅಭಿವೃದ್ಧಿಗೆ ಶ್ರಮಿಸುವುದು ನಮ್ಮ ಉದ್ದೇಶ ಎಂದು ಹೇಳಿದರು.



**ಜಿ.ಟಿ.ದೇವೇಗೌಡ ಅವರನ್ನು ಮಾಜಿ ಸಚಿವ ಎಚ್.ಕೆ.ಪಾಟೀಲ್, ಸಹಕಾರ ಮಾರುಕಟ್ಟೆ ಮಹಾಮಂಡಳದ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ಅಭಿನಂದಿಸಿದರು.**

- **ರಾಜ್ಯದ ಸಹಕಾರಿ ಸಂಘಗಳ ಸ್ಥಿತಿಗತಿ ಬಗ್ಗೆ ಸರ್ಕಾರಕ್ಕೆ ವರದಿ**
- **ಪ್ರತಿ ಹಳ್ಳಿಗೂ ಸಹಕಾರ ಕ್ಷೇತ್ರವನ್ನು ತಲುಪಿಸುವೆ: ಜಿ.ಟಿ.ದೇವೇಗೌಡ**

**ಜಿಟಿಡಿಗಿದೆ ಉತ್ತಮ ಆಡಳಿತ ಅನುಭವ:** ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಜಿ.ಟಿ.ದೇವೇಗೌಡ ಅವರು ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿದ್ದಾರೆ. ಅವರಿಗೆ ಒಳ್ಳೆಯ ಆಡಳಿತ ಅನುಭವವಿದೆ. ಮುಂದಿನ ಐದು ವರ್ಷದಲ್ಲಿ ಸಹಕಾರ ಸಂಸ್ಥೆಯನ್ನು ಉತ್ತಮ ರೀತಿಯಲ್ಲಿ ಮುನ್ನಡೆಸಲಿದ್ದಾರೆ ಎಂದು ಹೇಳಿದರು.

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಮಾಜಿ ಸಚಿವ ಎಚ್.ಕೆ.ಪಾಟೀಲ್, ರಾಜ್ಯ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಬೆಳ್ಳಿ ಪ್ರಕಾಶ್, ಉಪಾಧ್ಯಕ್ಷ ಜಿ.ಡಿ.ಹರೀಶ್ ಗೌಡ, ಸಹಕಾರ ಮಾರುಕಟ್ಟೆ ಮಹಾಮಂಡಳದ ಅಧ್ಯಕ್ಷ ಎಂ.ಎನ್.ರಾಜೇಂದ್ರ ಕುಮಾರ್, ಸಹಕಾರ ಮಹಮಂಡಳದ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ, ಸಹಕಾರ ಮಹಿಳಾ ಮಂಡಳದ ಅಧ್ಯಕ್ಷೆ ಶಕುಂತಲಾ ಬೆಲದಾಳೆ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರು ಅಭಿನಂದಿಸಿದರು.

## 14 ನಿರ್ದೇಶಕರ ಆಯ್ಕೆ

ರಾಜ್ಯ ಸಹಕಾರ ಮಂಡಳದ 14 ನಿರ್ದೇಶಕರನ್ನು 29 ಜಿಲ್ಲಾ ಯೂನಿಯನ್‌ಗಳಿಂದ ಆಯ್ಕೆ ಮಾಡಲಾಗಿದೆ. ಮೈಸೂರಿನಿಂದ ಜಿ.ಟಿ.ದೇವೇಗೌಡ, ಬೆಳಗಾವಿಯಿಂದ ಜಗದೀಶ್ ಎಂ.ಕವಟಗಿಮಠ, ಕೊಪ್ಪಳದಿಂದ ಡಾ.ಶೇಖರಗೌಡ ಮಾಲಿ ಪಾಟೀಲ್, ಬೀದರ್‌ನಿಂದ ಉಮಾಕಾಂತ ನಾಗಮಾರಪಳ್ಳಿ, ಚಿಕ್ಕಮಗಳೂರಿನಿಂದ ಬಿ.ಸಿ.ಲೋಕಪ್ಪಗೌಡ, ಬೆಂಗಳೂರು ಗ್ರಾಮಾಂತರದಿಂದ ಎ.ಸಿ.ನಾಗರಾಜ್, ಚಿತ್ರದುರ್ಗದಿಂದ ಆರ್.ರಾಮರೆಡ್ಡಿ, ಶಿವಮೊಗ್ಗದಿಂದ ಬಿ.ಡಿ.ಭೂಕಾಂತ್, ರಾಮನಗರದಿಂದ ಎಚ್.ಎನ್.ಅಶೋಕ್, ಉಡುಪಿಯಿಂದ ಬಿ.ಜಯಕರ ಶೆಟ್ಟಿ, ವಿಜಯಪುರದಿಂದ ಈರಣ್ಣ ಜೆ.ಪಟ್ಟಣಶೆಟ್ಟಿ, ಹಾವೇರಿಯಿಂದ ಬಸವರಾಜ, ಬಳ್ಳಾರಿಯಿಂದ ಜೆ.ಎಂ.ಶಿವಪ್ರಸಾದ್ ಹಾಗೂ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳದಿಂದ ಗದಿಗಪ್ಪಗೌಡ ಪ.ಪಾಟೀಲ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.